**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ**
**ಬೆಂಗಳೂರು – 560 001**

ಸಂಖ್ಯೆ: ಯೋ 8 ಪಂ ಸೌ ಕು ನಿ ಶೌ/ಅನು 01/2012–13 ದಿ: 13.08.2012

**[ಅತ್ಯಾಧ್ಯತೆ]**

**ಸುತ್ತೋಲೆ**

**ವಿಷಯ: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯಗಳ ಸಮರ್ಪಕ ಬಳಕೆಗಾಗಿ "ಶಾಲಾ ಸಂಪೂರ್ಣ ಸ್ವಚ್ಛತಾ ಪಾಕ್ಷಿಕ" ಕಡ್ಡಾಯವಾಗಿ ಆಚರಿಸುವ ಬಗ್ಗೆ**

**ಉಲ್ಲೇಖ:**
1. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ದಾಖಲಿಸಿರುವ ಸಾರ್ವಜನಿಕ ಹಿತಾಸಕ್ತಿ ರಿಟ್ ಪಿಟಿಷನ್ ಸಂಖ್ಯೆ: 26877/2009 ದಾವೆ.
2. ಸರ್ವ ಶಿಕ್ಷಣ ಅಭಿಯಾನ ಯೋಜನೆ ನಿರ್ದೇಶನಾಲಯದ ಪತ್ರ ದಿ: 23.01.2012
3. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿ: 30.05.2012 ಮತ್ತು 17.07.2012
4. ಮಾನ್ಯ ಉಚ್ಛ ನ್ಯಾಯಾಲಯದ ದಾವೆ ಕಾರಣ ರಚಿತವಾದ ತಜ್ಞರ ಸಮಿತಿ ಸಭಾ ನಡವಳಿ ದಿ: 27.01.2012
5. ಮಾನ್ಯ ಆಯುಕ್ತರ ಮತ್ತು ಅಪರ ಆಯುಕ್ತರ ಸುತ್ತೋಲೆ ದಿ: 30.07.2012 ಮತ್ತು 04.08.2012
6. ಮಾನ್ಯ ಸರ್ಕಾರದ ಕಾರ್ಯದರ್ಶಿಗಳವರ ಎಂಪಿಕ್ ಸಭೆ ದಿ: 09.08.2012

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ "ಶೌಚಾಲಯವೇ ಸೌಖ್ಯಾಲಯ" ಉತ್ತಮ ಆರೋಗ್ಯ ಭಾಗ್ಯಕ್ಕೆ ಇದರ ನಿರ್ವಹಣೆಯೇ ಮೂಲ. ಸ್ವಚ್ಛತೆ ಇದ್ದಲ್ಲಿ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಸ್ವಾಭಾವಿಕವಾಗಿಯೇ ತಾವೂ ಸ್ವಚ್ಛತೆಯನ್ನು ಅನುಸರಿಸಿಕೊಂಡು ಹೋಗುತ್ತಾರೆ. ಈ ನಿಟ್ಟಿನಲ್ಲಿ ಶಾಲಾ ಶೌಚಾಲಯದ ಸ್ವಚ್ಛತೆಯು ಆ ಶಾಲೆಯ ಸಮಸ್ತ ಚಟುವಟಿಕೆಗಳಿಗೆ ಕೈಗನ್ನಡಿ ಆಗಿರುತ್ತದೆ. ಪ್ರತಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಿ ಬಳಸಿಕೊಳ್ಳಲು ಅನುಕೂಲವಾಗುವಂತೆ ಸರ್ವ ಶಿಕ್ಷಣ ಅಭಿಯಾನ ಯೋಜನೆ, ರಾಜ್ಯ ವಲಯದ ಮುಂದುವರಿಕೆ ಪಂಚ ಸೌಲಭ್ಯ ಯೋಜನೆ, ನಿರ್ಮಲ ಗ್ರಾಮ ಪುರಸ್ಕಾರ ಯೋಜನೆ, ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿನ ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸಾಮಾನ್ಯ ಶೌಚಾಲಯ, ಹೆಣ್ಣು ಮಕ್ಕಳ ವಿಶೇಷ ಶೌಚಾಲಯ, ವಿಕಲಚೇತನರ ವಿಶೇಷ ಶೌಚಾಲಯ, ಮತ್ತು ಹೈಟೆಕ್ ಶೌಚಾಲಯಗಳನ್ನು ಹಾಗೂ ಕುಡಿಯುವ ನೀರಿನ ಸೌಲಭ್ಯಗಳನ್ನು ಯತೇಚ್ಛವಾಗಿ ಕಲ್ಪಿಸಿಕೊಡಲಾಗಿದೆ. ಇವುಗಳ ವ್ಯವಸ್ಥಿತ ನಿರ್ವಹಣೆ ಮಾಡುವಂತೆ ಹಲವಾರು ಸುತ್ತೋಲೆಗಳನ್ನು ಹೊರಡಿಸುವ ಜೊತೆಗೆ ಸಭೆಗಳಲ್ಲಿ ಇವುಗಳ ನಿರ್ವಹಣೆಯ ತೀವ್ರತೆಯ ಬಗ್ಗೆ ತಿಳಿಸಲಾಗಿರುತ್ತದೆ. ಇದನ್ನು ಆಧರಿಸಿ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು

ನಂಬಲಾಗಿದ್ದು, ಈ ಬಗ್ಗೆ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ರಾಜ್ಯ ಉಚ್ಛ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಹಾಗೆಯೇ ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸರ್ವೋಚ್ಛ ನ್ಯಾಯಾಲಯದಲ್ಲಿ ಅಫಿಡೆವಿಟ್ ದಾಖಲಿಸಿರುತ್ತಾರೆ.

ಉಲ್ಲೇಖ–1ರಂತೆ ರಿಟ್ ಪಿಟಿಷನ್‌ದಾರರಾದ ಶ್ರೀ.ಎ.ವಿ.ಅಮರನಾಥ ರವರು ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಗಳ ಕೆಲವು ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಶಾಲೆಗಳಲ್ಲಿ ಕನಿಷ್ಟ ಮೂಲಭೂತ ಸೌಲಭ್ಯಗಳೂ ಇಲ್ಲದಿರುವ ಬಗ್ಗೆ, ಶಿಥಿಲ ಸ್ಥಿತಿಯಲ್ಲಿರುವ ಶೌಚಾಲಯಗಳ ಬಗ್ಗೆ, ಪೋಟೋ ಸಮೇತ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಇದೇ ಮಾಹಿತಿಗಳು ಫೋಟೋ ಸಮೇತ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತವೆ. ಈ ಬಗ್ಗೆ ಗೌರವಾನ್ವಿತ ಉಚ್ಛ ನ್ಯಾಯಾಲಯದ ಮಾನ್ಯ ಮುಖ್ಯ ನ್ಯಾಯಮೂರ್ತಿಗಳು ಅಸಮಾಧಾನಗೊಂಡು ವ್ಯವಸ್ಥೆಯ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುತ್ತಾರೆ.

ಉಲ್ಲೇಖ–2ರಂತೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಪ್ರತಿ ವರ್ಷ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿಗೆ ತಲಾ ರೂ.5000/–ಗಳಂತೆ ಹಿರಿಯ ಪ್ರಾಥಮಿಕ ಶಾಲೆಗಳಿಗೆ ತಲಾ ರೂ.12000/–ಗಳಂತೆ ಶಾಲಾ ಅನುದಾನವನ್ನು ನೀಡಲಾಗುತ್ತಿದೆ. ಜೊತೆಗೆ ಶಾಲಾ ದುರಸ್ತಿ ಮತ್ತು ನಿರ್ವಹಣಾ ಅನುದಾನವಾಗಿ 3 ಕೊಠಡಿಗಳವರೆಗಿನ ಶಾಲೆಗಳಿಗೆ ರೂ.7500/– 3 ರಿಂದ 5 ಕೊಠಡಿಗಳನ್ನು ಹೊಂದಿರುವ ಶಾಲೆಗೆ ರೂ.15000/– 6 ಕೊಠಡಿ ಹೊಂದಿರುವ ಶಾಲೆಗಳಿಗೆ ರೂ.20000/– 7ಕ್ಕಿಂತ ಹೆಚ್ಚು ಕೊಠಡಿ ಹೊಂದಿರುವ ಶಾಲೆಗಳಿಗೆ ರೂ.22500/--ಗಳನ್ನು ನೀಡುವುದರ ಮೂಲಕ ಈ ಅನುದಾನವನ್ನು ಮುಖ್ಯವಾಗಿ ಕುಡಿಯುವ ನೀರು, ಶೌಚಾಲಯ ದುರಸ್ತಿ ಮತ್ತು ನಿರ್ವಹಣೆ ಹಾಗೂ ಸ್ವಚ್ಛತಾ ಸಾಮಗ್ರಿಗಳ ಖರೀದಿಗಾಗಿ ಉಪಯೋಗಿಸುವಂತೆ ಸೂಚಿಸಲಾಗಿರುತ್ತದೆ.

ಉಲ್ಲೇಖ–3ರಂತೆ 2012–13ನೇ ಸಾಲಿನಲ್ಲಿ ಆಯುಕ್ತರ ಕಛೇರಿಯಿಂದ ರಾಜ್ಯ ವಲಯದ ಮುಂದುವರೆದ ಯೋಜನೆ ಪಂಚ ಸೌಲಭ್ಯದಡಿ ರಾಜ್ಯದ ಎಲ್ಲಾ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿಗೆ ವರ್ಷಕ್ಕೆ ರೂ.1500/– ಹಿರಿಯ ಪ್ರಾಥಮಿಕ ಶಾಲೆಗಳಿಗೆ ರೂ.2500/– ಪ್ರೌಢಶಾಲೆಗಳಿಗೆ ರೂ.3500/–ಗಳಂತೆ ತ್ರೈಮಾಸಿಕವಾರು ನಾಲ್ಕು ಕಂತುಗಳಲ್ಲಿ ಶಾಲಾ ಎಸ್‌ಡಿಎಂಸಿಗಳಿಗೆ ಅನುದಾನವನ್ನು ನೀಡಲಾಗುತ್ತಿದ್ದು, ಈಗಾಗಲೇ ಎರಡು ತ್ರೈಮಾಸಿಕ ಕಂತುಗಳನ್ನು ಬಿಡುಗಡೆ ಮಾಡಿ ಶೌಚಾಲಯಗಳ ಚಿಕ್ಕ ಪುಟ್ಟ ದುರಸ್ತಿ, ಸ್ವಚ್ಛತಾ ಸಾಮಗ್ರಿಗಳಾದ ನೀರಿನ ಬಕೆಟ್, ಜಗ್, ಬ್ರಷ್, ಬ್ಲೀಚಿಂಗ್‌ಪೌಡರ್, ಪೆನಾಯಿಲ್, ಸೋಪ್ ಮುಂತಾದವುಗಳನ್ನು ಖರೀದಿಸಿ ಬಳಸಿಕೊಳ್ಳಲು ಸೂಚಿಸಲಾಗಿರುತ್ತದೆ.

ಹಾಗೆಯೇ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಶೌಚಾಲಯ ಮತ್ತು ಕುಡಿಯುವ ನೀರಿನ ಸಮರ್ಪಕ ನಿರ್ವಹಣೆಗಾಗಿ ಶಾಲಾ ಹಂತದಲ್ಲಿ ಮಕ್ಕಳಿಂದ ಸರ್ಕಾರೇತರ ಸ್ವಚ್ಛತಾ ಶುಲ್ಕ ರೂ.15.00ಗಳನ್ನು ಅಧಿಕೃತವಾಗಿ

ವಸೂಲಿ ಮಾಡಿ ಖರ್ಚು ಮಾಡಲಾಗುತ್ತಿದೆ. ಅಲ್ಲದೇ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಪ್ರತಿ ವರ್ಷವೂ ಶಾಲಾ ನಿರ್ವಹಣೆಗಾಗಿ ಸಾಕಷ್ಟು ಅನುದಾನವನ್ನು ನೀಡಲಾಗುತ್ತಿದೆ.

ಉಲ್ಲೇಖ–6ರಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಕಾರ್ಯದರ್ಶಿಗಳು ದಿ: 09.08.2012ರಂದು ನಡೆಸಿದ ಉನ್ನತ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಲಾ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ವಹಣೆಗಾಗಿ ಮೇಲ್ಕಂಡಂತೆ ಶಾಲೆಗಳಿಗೆ ಅನುದಾನ ನೀಡುತ್ತಿದ್ದರೂ ಇಲಾಖೆಯು ಮುಜುಗರಕ್ಕೆ ಒಳಗಾಗುವಂತೆ ಮಾಧ್ಯಮಗಳಲ್ಲಿ ಶಾಲಾ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯ ದುಸ್ಥಿತಿ ಕುರಿತು ವರದಿ ಪ್ರಕಟಗೊಳ್ಳುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತ ಶಾಲೆಗಳ ಶೌಚಾಲಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರುವವರ ವಿರುದ್ಧ ಗಂಭೀರ ಹಾಗೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವ ಬಗ್ಗೆ ಸೂಚನೆ ನೀಡಿರುತ್ತಾರೆ. ಅದಕ್ಕಾಗಿ ಮುಂಜಾಗೃತ ಕ್ರಮವಾಗಿ ಈ ಸುತ್ತೋಲೆಯನ್ನು ಹೊರಡಿಸುತ್ತಾ, **"ಶಾಲಾ ಸಂಪೂರ್ಣ ಸ್ವಚ್ಛತಾ ಪಾಕ್ಷಿಕ" ವನ್ನು ವಿಧ್ಯುಕ್ತ ರೀತಿಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಆಚರಣೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಇಲಾಖೆಯ ಘನತೆಯನ್ನು ಎತ್ತಿಹಿಡಿಯಲು ಸೂಚಿಸಿದೆ.**

**ಒಂದು ವೇಳೆ ಇಲ್ಲಿಯವರೆಗೆ ಯಾವುದೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಮತ್ತು ಶೌಚಾಲಯವನ್ನು ಒದಗಿಸಿಕೊಳ್ಳದೇ ಇದ್ದ ಪಕ್ಷದಲ್ಲಿ ಮುಂದಿನ ಆಗು ಹೋಗುಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರು[ಆಡಳಿತ] ರವರನ್ನೇ ಹೊಣೆಗಾರರನ್ನಾಗಿಸಲಾಗುವುದು.**

**"ಶಾಲಾ ಸಂಪೂರ್ಣ ಸ್ವಚ್ಛತಾ ಪಾಕ್ಷಿಕ" ಆಚರಣೆ ಕಾರ್ಯಸೂಚಿ.**

✓ ಸರ್ಕಾರಿ ಶಾಲೆಗಳಲ್ಲಿ ಶಿಥಿಲಗೊಂಡಂತಿರುವ, ಬಣ್ಣಮಾಸಿರುವ, ದುರ್ವಾಸನೆಯಿಂದ ಕೂಡಿರುವ, ಬಳಕೆಗೆ ಯೋಗ್ಯವಲ್ಲವೆಂದು ಬೀಗ ಹಾಕಿಕೊಂಡಿರುವ, ನೀರಿನ ಸೌಲಭ್ಯ ಕಲ್ಪಿಸದೇ ಇರುವ ಶಾಲಾ ಶೌಚಾಲಯಗಳನ್ನು ಸಂಪೂರ್ಣವಾಗಿ ದುರಸ್ತಿಗೊಳಿಸಿ ಸ್ವಚ್ಛತೆಯಿಂದ ಸಮರ್ಪಕವಾಗಿ ನಿರ್ವಹಣೆ ಮಾಡಲು ಆಂದೋಲನದ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅನುಕೂಲವಾಗುವಂತೆ ದಿ: 15.08.2012ರ ಭಾರತದ **66ನೇ ಸ್ವಾತಂತ್ರ್ಯದ** ದಿನಾಚರಣೆ ದಿನದಿಂದ ಆರಂಭಿಸಿ ದಿ: 29.08.2012 ರವರೆಗಿನ 15 ದಿನಗಳು ಶಾಲೆಗಳಲ್ಲಿ ದಿನವಹಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ **"ಶಾಲಾ ಸಂಪೂರ್ಣ ಸ್ವಚ್ಛತಾ ಪಾಕ್ಷಿಕ"** ಆಚರಿಸುವಂತೆ ಹಾಗೂ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಿಆರ್‌ಸಿ ಕೇಂದ್ರವಾರು, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಣ ಸಂಯೋಜಕರು, ಸಮನ್ವಯ ಸಂಪನ್ಮೂಲ ಶಿಕ್ಷಕರು, ಬಿಆರ್‌ಸಿ ಸಂಪನ್ಮೂಲ

ವ್ಯಕ್ತಿಗಳು ಮತ್ತು ಬಿಆರ್‌ಸಿ ಸಮನ್ವಯಾಧಿಕಾರಿಗಳಿಗೆ ಹೊಣೆಗಾರಿಕೆಯನ್ನು ಹಂಚಿಕೆ ಮಾಡಿ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲು ತಿಳಿಸಿದೆ. ಈ 15 ದಿನಗಳ ಅವಧಿಯಲ್ಲಿ ನಡೆಸಬಹುದಾದ ಕಾರ್ಯಕ್ರಮದ ಮಾದರಿ ವೇಳಾ ಪಟ್ಟಿಯನ್ನು ಈ ಕೆಳಕಂಡಂತೆ ನೀಡಿದೆ. ಈ ಕಾರ್ಯಕ್ರಮ ನಡೆಸಲು ಶಾಲೆಯಲ್ಲಿ ಲಭ್ಯವಿರುವ ಯಾವುದೇ ಅನುದಾನವನ್ನು ಬಳಸಲು ಅಥವಾ ಇತರೆ ಯಾವುದೇ ಸಂಪನ್ಮೂಲವನ್ನು ಆಧರಿಸಿ ನಡೆಸಲು ಸೂಚಿಸಿದೆ. **ಈಗಾಗಲೇ ನೀಡಿರುವ ಸುತ್ತೋಲೆಯಂತೆ ತರಗತಿ ಪ್ರಕ್ರಿಯೆಯನ್ನು ಗಣಕೀಕರಣ ಮಾಡುವ ನಮೂನೆಯಲ್ಲಿ ಶಾಲಾ ಶೌಚಾಲಯ ಮತ್ತು ಕುಡಿಯುವ ನೀರಿನ ಸದ್ಬಳಕೆ ಮಾಡಲಾಗುತ್ತಿದೆಯೇ? ಇಲ್ಲವೇ? ಎಂಬ ಮಾಹಿತಿಯನ್ನೂ ಗಣಕೀಕರಿಸಲು ತಿಳಿಸಿದೆ.**

| ದಿನಾಂಕ | ಕಾರ್ಯಕ್ರಮದ ವಿವರ |
|---|---|
| 15.08.2012 | 1. ಶಾಲಾ ಸ್ವತಂತ್ರ್ಯ ದಿನಾಚರಣೆ ಸಭೆಯಲ್ಲಿ ಮಕ್ಕಳಿಗೆ, ಪೋಷಕರಿಗೆ, ಎಸ್‌ಡಿಎಂಸಿ ಸದಸ್ಯರಿಗೆ, ಜನ ಪ್ರತಿನಿಧಿಗಳಿಗೆ, ಸಾರ್ವಜನಿಕರಿಗೆ ಶಾಲಾ ಸಂಪೂರ್ಣ ಸ್ವಚ್ಚತಾ ಪಾಕ್ಷಿಕ ಆಚರಣೆಯ ಉದ್ದೇಶದ ಬಗ್ಗೆ ವಿವರಣೆ ನೀಡುವುದು.<br>2. ಶಾಲಾ ಸಂಪೂರ್ಣ ಸ್ವಚ್ಚತಾ ಪಾಕ್ಷಿಕದ ಬಗ್ಗೆ ಬ್ಯಾನರ್ ತಯಾರಿಸಿ ಪ್ರಚಾರ ಮಾಡುವುದು.<br>3. ಶ್ರಮದಾನ ಮಾಡುವ ಮೂಲಕ ಶಾಲಾ ಕೊಠಡಿ, ಆಟದ ಮೈದಾನ, ಶೌಚಾಲಯ, ನೀರಿನ ಸಂಪು, ಮುಂತಾದವುಗಳನ್ನು ಸ್ವಚ್ಛಗೊಳಿಸಿ, ದೂಳು, ಜೇಡರ ಬಲೆ, ಕೊಳಚೆ ಹೋಗಲಾಡಿಸುವುದು.<br>4. ಜನ ಪ್ರತಿನಿಧಿಗಳು ಮತ್ತು ದಾನಿಗಳನ್ನು ಶಾಲಾ ಸ್ವಚ್ಛತೆಗೆ ಪೂರಕವಾಗುವ ಶೌಚಾಲಯ ಸಾಮಗ್ರಿಗಳನ್ನು ಒದಗಿಸಿಕೊಡುವಂತೆ ಮನವೊಲಿಸುವುದು. |
| 16.08.2012 | 1. ಶಾಲಾ ಪ್ರಾರ್ಥನೆಯ ವೇಳೆಯಲ್ಲಿ ಆರೋಗ್ಯ ಭಾಗ್ಯದ ಮಹತ್ವವನ್ನು ತಿಳಿಸುವುದು.<br>2. ಮಕ್ಕಳು ರಸ್ತೆ ಬದಿಯಲ್ಲಿ, ಬಯಲಿನಲ್ಲಿ ಮಲ ಮೂತ್ರ ವಿಸರ್ಜನೆ ಮಾಡದಂತೆ ಹಾಗೂ ಶಾಲಾ ಶೌಚಾಲಯವನ್ನೇ ಕಡ್ಡಾಯವಾಗಿ ಬಳಸುವ ಬಗ್ಗೆ ಪ್ರತಿಜ್ಞೆ ಮಾಡಿಸುವುದು.<br>3. ವೈಯಕ್ತಿಕ ಸ್ವಚ್ಛತೆಗೆ ಹೆಚ್ಚು ಗಮನ ನೀಡುವಂತೆ ಮತ್ತು ಕಡ್ಡಾಯವಾಗಿ ಪಾದರಕ್ಷೆಯನ್ನು ಬಳಸುವಂತೆ ಮಕ್ಕಳಿಗೆ ಸಲಹೆ ನೀಡುವುದು. |
| 17.08.2012 | 1. ಶಾಲೆ ಆರಂಭಕ್ಕೆ ಮುಂಚಿತವಾಗಿ ಪ್ರಮುಖ ಬೀದಿಗಳಲ್ಲಿ ಮಕ್ಕಳಿಂದ ಘೋಷಣಾ ಫಲಕದೊಂದಿಗೆ ಪ್ರಭಾತ ಭೇರಿ ಮಾಡಿಸುವ ಮೂಲಕ ಸಾರ್ವಜನಿಕರು ಶಾಲಾ ಶೌಚಾಲಯವನ್ನು ದುರ್ಬಳಕೆ ಮಾಡದಂತೆ ಜನ ಜಾಗೃತಿ ಮೂಡಿಸುವುದು. |
| 18.08.2012 | 1. ಶಾಲಾ ಸಂಸತ್ ರಚನೆ ಮಾಡಿ ಶಾಲಾ ಸಂಪೂರ್ಣ ಸ್ವಚ್ಛತೆ ನಿರ್ವಹಣೆಗಾಗಿ ತಂಡಗಳನ್ನು ರಚಿಸಿ |

| | |
|---|---|
| | ಪಾಳಿಯದಲ್ಲಿ ಸರದಿಯಂತೆ ಶೌಚಾಲಯಗಳಿಗೆ ಶಾಲೆ ಆರಂಭಕ್ಕೆ ಮುಂಚೆ, ಮಧ್ಯಾಹ್ನದ ಅವಧಿ ಮತ್ತು ಶಾಲೆ ಮುಕ್ತಾಯದ ನಂತರ ನೀರನ್ನು ಹಾಕುವ ಮೂಲಕ ಸ್ವಚ್ಛವಾಗಿಡುವ ಜವಾಬ್ದಾರಿಯನ್ನು ವಹಿಸುವುದು. |
| **21.08.2012** | 1. ತಾಲ್ಲೂಕು ಹಂತದಲ್ಲಿ ಸೋಪ್‌ಪೌಡರ್ ಮತ್ತು ಪೆನಾಯಿಲ್ ತಯಾರು ಮಾಡುವ ಬಗ್ಗೆ ಮುಖ್ಯ ಶಿಕ್ಷಕರಿಗೆ ಎಸ್.ಯು.ಪಿ.ಡಬ್ಲ್ಯೂ. [SUPW] ಕಾರ್ಯಕ್ರಮದಡಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಾಗಾರವನ್ನು ನಡೆಸುವುದು. |
| **22.08.2012** | 1. ಶಿಥಿಲಗೊಂಡಿರುವ ಎಲ್ಲಾ ಶೌಚಾಲಯಗಳನ್ನು ದುರಸ್ತಿಗೊಳಿಸುವುದು.<br>2. ಮುರಿದಿರುವ ಶೌಚಾಲಯಗಳ ಬಾಗಿಲುಗಳನ್ನು ಬದಲಿಸುವುದು.<br>3. ಒಡೆದು ಹೋಗಿರುವ ಶೌಚಾಲಯದ ಬೇಸಿನ್‌ಗಳನ್ನು ಬದಲಾಯಿಸುವುದು.<br>4. ಶೌಚಾಲಯದ ಗೋಡೆಯನ್ನು ಎತ್ತರಿಸುವುದು. |
| **23.08.2012** | 1. ಮಕ್ಕಳು ಮತ್ತು ಶಿಕ್ಷಕರು ಶೌಚಾಲಯವನ್ನು ಬಳಸುವ ಮುಂಚೆ ಮತ್ತು ಬಳಸಿದ ಮೇಲೆ ಸ್ವಂತ ಮನೆಯಲ್ಲಿರುವಂತೆ ನೀರು ಹಾಕಿ ಸ್ವಚ್ಛವಾಗಿಡುವ ಮೂಲಕ ಸ್ವಾವಲಂಬನೆ ಗುಣ ಮತ್ತು ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳುವಂತೆ ತರಬೇತಿ ನೀಡುವುದು. |
| **24.08.2012** | 1. ಟೈಲ್ಸ್ ಹಾಕದೇ ಇರುವ ಎಲ್ಲಾ ಶೌಚಾಲಯಗಳಿಗೆ ಹಂತ ಹಂತವಾಗಿ ನೆಲ ಮತ್ತು ನೆಲದಿಂದ ಒಂದು ಅಡಿ ಎತ್ತರ ಗೋಡೆಗೆ ಟೈಲ್ಸ್ ಹಾಕಿಸಿ ಆಧುನಿಕರಣಗೊಳ್ಳಿಸುವುದು.<br>2. **ಜಿಲ್ಲಾ ಉಪನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಶೇ.25 ರಷ್ಟು ಶಾಲೆಗಳಲ್ಲಿ ಟೈಲ್ಸ್ ಹಾಕಿಸುವ ಕೆಲಸವನ್ನು 2012ನೇ ಸಾಲಿನ ಕನ್ನಡ ರಾಜ್ಯೋತ್ಸವದ ವೇಳೆಗೆ ಪೂರ್ಣಗೊಳಿಸುವ ಬಗ್ಗೆ ಕಡ್ಡಾಯವಾಗಿ ಗುರಿ ನಿಗದಿಪಡಿಸಿಕೊಳ್ಳುವುದು.**<br>3. ಶೌಚಾಲಯದಲ್ಲಿ ಚಿಕ್ಕ ಚಿಕ್ಕ ನೀರಿನ ಟ್ಯಾಂಕ್‌ನ್ನು ಕಟ್ಟಿಸುವುದು.<br>4. ನೀರಿನ ವಾಟರ್ ಫೀಲ್ಡರ್‌ನ್ನು ಸರ್ವೀಸ್ ಮಾಡಿಸುವುದು. |
| **25.08.2012** | 1. ಶಾಲಾ ಆಟದ ಮೈದಾನದಲ್ಲಿರುವ ಮುಳ್ಳಿನ ಪೊದೆ, ಕಳೆ, ಕಳ್ಳಿ, ಕಲ್ಲು, ಗಾಜಿನ ಚೂರು, ಮುಂತಾದವುಗಳನ್ನು ತೆಗೆಸಿ ಸ್ವಚ್ಛಗೊಳಿಸುವುದು, ಶಾಲಾ ಬೇಲಿಯನ್ನು ಕತ್ತರಿಸಿ ಕ್ರಮಬದ್ಧಗೊಳಿಸುವುದು.<br>2. ಕರಗುವ ತ್ಯಾಜ್ಯ ವಸ್ತುಗಳನ್ನು ಮತ್ತು ಕರಗದೆ ಇರುವ ಘನ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ಶಾಲೆಯ ಹಿಂಭಾಗದ ಸ್ಥಳದಲ್ಲಿ ಪ್ರತ್ಯೇಕ ಗುಂಡಿಗಳನ್ನು ತೆಗೆಸುವುದು. |
| **26.08.2012** | 1. ಒಡೆದು ಹೋದ ನೀರಿನ ಪೈಪ್‌ಗಳನ್ನು ದುರಸ್ತಿಗೊಳಿಸುವುದು.<br>2. ನಲ್ಲಿಯನ್ನು ಅಳವಡಿಸಿ ನೀರಿನ ಸಂಪರ್ಕ ಕಲ್ಪಿಸುವುದು. |

| | |
|---|---|
| | 3. ಶಾಶ್ವತ ಕುಡಿಯುವ ನೀರಿನ ಮೂಲಕ್ಕಾಗಿ ಸ್ಥಳೀಯ ಸಾಂಸ್ಥಿಕ ಸಂಸ್ಥೆಗಳಿಗೆ ಮತ್ತು ಸ್ಥಳೀಯ ದಾನಿಗಳಿಗೆ ಕೋರಿಕೆ ಸಲ್ಲಿಸುವುದು.<br>4. ಊಟದ ತಟ್ಟೆ ಮತ್ತು ಪಾತ್ರೆಗಳನ್ನು ತೊಳೆಯಲು ಸೂಕ್ತ ಸ್ಥಳಾವಕಾಶ ಕಲ್ಪಿಸಿಕೊಳ್ಳುವುದು<br>5. ಊಟವಾದ ನಂತರ ಉಳಿಯುವ ಆಹಾರ ಪದಾರ್ಥಗಳನ್ನು ಎಲ್ಲೆಂದರಲ್ಲಿ ಎಸೆಯದೇ ನಿರ್ದಿಷ್ಟ ಸ್ಥಳ ಅಥವಾ ತೊಟ್ಟಿಯಲ್ಲಿ ಹಾಕುವಂತೆ ಪ್ರೇರೇಪಿಸುವುದು. |
| 27.08.2012 | 1. ಶಾಲೆಯ ಎಲ್ಲಾ ಶೌಚಾಲಯಗಳಿಗೆ ಆಕರ್ಷಕ [ನೀಲಿ] ಬಣ್ಣ ಹಾಕಿಸುವ ಮೂಲಕ ಅಂದ ಚಂದ ಹೆಚ್ಚಿಸುವುದು.<br>2. ಶಾಲಾ ಶೌಚಾಲಯ ನಿರ್ವಹಣೆ ಬಗ್ಗೆ ಮಕ್ಕಳಿಗೆ ವಿಚಾರ ಗೋಷ್ಠಿ ನಡೆಸಿ ವಿಜೇತರಿಗೆ ಬಹುಮಾನ ನೀಡುವುದು. |
| 28.08.2012 | 1. ಶಾಲಾ ಶೌಚಾಲಯದ ಸದ್ಬಳಕೆ ಮತ್ತು ಶಾಲಾ ನೈರ್ಮಲ್ಯ ಕಾಪಾಡುವಂತೆ ಘೋಷಣಾ ಫಲಕಗಳನ್ನು ಗೋಡೆ ಮೇಲೆ ಬರೆಸುವುದು.<br>2. "ಹೆಣ್ಣು ಮಕ್ಕಳಿಗಾಗಿ" ಮತ್ತು "ಗಂಡು ಮಕ್ಕಳಿಗಾಗಿ" ಎಂಬ ಸೂಚನಾ ಫಲಕ ಮತ್ತು ಚಿತ್ರಗಳನ್ನು ಶೌಚಾಲಯದ ಮೇಲೆ ಬರೆಸುವುದು. |
| 29.08.2012 | 1. ತರಗತಿ ಕೋಣೆಗಳಲ್ಲಿ "ನನ್ನನ್ನು ಬಳಸಿ" ಎಂಬ ಸೂಚನೆ ಬರೆದ ಡಸ್ಟ್ ಬಿನ್‌ಗಳನ್ನು ಇಡುವುದು.<br>2. ನೀರನ್ನು ಕುಡಿಯಲು ಅನುಕೂಲವಾಗುವಂತೆ ಸೂಕ್ತ ನಲ್ಲಿ ಇರುವ ಸ್ಟೀಲ್ ಡ್ರಂ ಮತ್ತು ಲೋಟವನ್ನು ವ್ಯವಸ್ಥೆ ಮಾಡುವುದು.<br>3. ಶೌಚಾಲಯದ ಸ್ವಚ್ಛತೆಗೆ ಬೇಕಾದ ಪೊರಕೆ, ಟವಲ್, ಟವಲ್ ಸ್ಟಾಂಡ್, ಸೋಪ್, ಸೋಪ್ ಆಯಿಲ್, ಕನ್ನಡಿ, ನೇಲ್ ಕಟರ್, ಬಾಚಣಿಗೆ, ಕೊಬ್ಬರಿ ಎಣ್ಣೆ, ಬ್ಲೀಚಿಂಗ್ ಪೌಡರ್, ಪೆನಾಯಿಲ್, ಬ್ರಷ್, ನೀರಿನ ಬಕೆಟ್, ಜಗ್, ವಿವಿಧ ಅಳತೆಯ 3–4 ಜೊತೆ ಪಾದರಕ್ಷೆ ಖರೀದಿಸಿ ವ್ಯವಸ್ಥಿತವಾಗಿ ಬಳಸಿಕೊಳ್ಳುವಂತೆ ಸೂಚನೆ ನೀಡುವುದು.<br>4. ನಿತ್ಯ ಶೌಚಾಲಯ ಮತ್ತು ನೀರು ಸಂಗ್ರಹದ ಸಂಪುಗಳನ್ನು ಉಜ್ಜಿ ತೊಳೆದು ಶುಭ್ರಗೊಳಿಸಲು ಸೂಕ್ತ ಸ್ವಚ್ಛತಾಗಾರರನ್ನು ನಿಯೋಜಿಸಿಕೊಂಡು ದಿನಗೂಲಿ ನೀಡಲು ಕ್ರಮ ವಹಿಸುವುದು. [ಮಕ್ಕಳ ಸಂಖ್ಯೆಗನುಗುಣವಾಗಿ ತಿಂಗಳಿಗೆ ರೂ.700/–ಗಳವರೆಗೆ ಅನುದಾನ ನಿಗಧಿಪಡಿಸಿಕೊಳ್ಳುವುದು].<br>5. **ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲೂ ಶಾಲಾ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥಿತ ನಿರ್ವಹಣೆಯು ಉತ್ತಮವಾಗಿರುವ ಬಗ್ಗೆ ಶ್ವೇತ ಪತ್ರವನ್ನು ಹೊರಡಿಸುವುದು.**<br>6. **ಶಾಲಾ ನಾಮಫಲಕ ಮತ್ತು ಹೆಣ್ಣು–ಗಂಡು ಮಕ್ಕಳ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಾಣಿಸಿರುವಂತೆ ಶಾಲಾವಾರು ತಲಾ ನಾಲ್ಕು ಫೋಟೋಗಳನ್ನು ಮುಖ್ಯ ಶಿಕ್ಷಕರ ಮತ್ತು ಎಸ್‌ಡಿಎಂಸಿ ಅಧ್ಯಕ್ಷರ ಸಹಿಯೊಂದಿಗೆ ಸಂಗ್ರಹಿಸಿ ಸೀಆರ್‌ಸಿವಾರು ಆಲ್ಬಂಬ್ ತಯಾರಿಸಿ, ತಾಲ್ಲೂಕು ಮತ್ತು ಜಿಲ್ಲಾವಾರು** |

| | |
|---|---|
| | ಕ್ರೋಢಿಕರಿಸಿ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಯೋಜನಾ ಶಾಖೆಗೆ ಕಳುಹಿಸಿಕೊಡುವುದು. |

ಮೇಲ್ಕಂಡ ಮಾದರಿಯಂತೆ **"ಶಾಲಾ ಸಂಪೂರ್ಣ ಸ್ವಚ್ಛತಾ ಪಾಕ್ಷಿಕ"** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಉತ್ತಮ ಗುಣಮಟ್ಟದಲ್ಲಿ ಮುಂದುವರೆಸಿಕೊಂಡು ಹೋಗಲು ತಿಳಿಸಿದೆ. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಧೋರಣೆ ಮತ್ತು ನಕಾರಾತ್ಮಕ ಮನೋಭಾವ ತೋರುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ತಕ್ಷಣ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವುದು.

ಸಿಆರ್‌ಸಿ ವ್ಯಾಪ್ತಿಗೆ ಒಂದು ಶಾಲೆಯಂತೆ ಈ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಶಾಲೆಗಳನ್ನು ಆಯ್ಕೆ ಮಾಡಿ ಕೊಂಡು ಶಿಕ್ಷಕರ ದಿನಾಚರಣೆ ದಿನದಂದು ಪ್ರೋತ್ಸಾಹದಾಯಕವಾಗಿ ಪ್ರಶಂಸಾ ಪತ್ರ ಮತ್ತು ಬಹುಮಾನಗಳನ್ನು ನೀಡಿ [ದಾನಿಗಳಿಂದ ಪಡೆದು] ಗೌರವಿಸುವುದು. ಮಾದರಿ ಪ್ರಶಂಸಾ ಪತ್ರದ ಮಾದರಿಯನ್ನು ಇದರೊಂದಿಗೆ ಲಗತ್ತಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರನ್ನೊಳಗೊಂಡಂತೆ ತ್ರಿಸದಸ್ಯ ಸಮಿತಿ ರಚಿಸಿಕೊಂಡು ತಾಲ್ಲೂಕಿನಲ್ಲಿರುವ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಭೇಟಿ ನೀಡಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥಿತ ನಿರ್ವಹಣೆಯನ್ನು ಆಧರಿಸಿ ಕೆಳಗಿನಂತೆ ಗ್ರೇಡ್‌ಗಳನ್ನು ನೀಡುವುದು.

1. ಎ ಗ್ರೇಡ್ – ಅತ್ಯುತ್ತಮ
2. ಬಿ ಗ್ರೇಡ್ – ಉತ್ತಮ
3. ಸಿ ಗ್ರೇಡ್ – ಸಾಧಾರಣ

ಉತ್ತಮ ಹಾಗೂ ಸಾಧಾರಣ ಗ್ರೇಡ್ ಪಡೆದಿರುವ ಶಾಲೆಗಳನ್ನು ಶಾಲಾ ಎಸ್.ಡಿ.ಎಂ.ಸಿ, ದಾನಿಗಳು ಮತ್ತು ಲಭ್ಯವಿರುವ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಅತ್ಯುತ್ತಮ "ಗ್ರೇಡ್–ಎ" ಪಡೆಯಲು ಜರೂರು ಹಾಗೂ ಸೂಕ್ತ ಕ್ರಮ ಜರುಗಿಸುವುದು..

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ

ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲಾ ಉಪನಿರ್ದೇಶಕರುಗಳ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:–

1. ಗೌರವ ಪೂರ್ವಕವಾಗಿ ಮಾನ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560 001 ರವರಿಗೆ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ ರವರ ಸೂಕ್ತ ಕ್ರಮಕ್ಕಾಗಿ
3. ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳ ಸೂಕ್ತ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ
5. ಕಛೇರಿ ಪ್ರತಿ.

\\10.96.135.22\typing3server\D\Planning\clean-12.docx

**ಕರ್ನಾಟಕ ಸರ್ಕಾರ**

ಸಾರ್ವಜನಿಕ ಶಿಕ್ಷಣ ಇಲಾಖೆ

.............................................................ಜಿಲ್ಲಾ ಪಂಚಾಯತ್

| 2012-13 |
| --- |
| **ಪ್ರಶಂಸಾ ಪತ್ರ** |

ದಿನಾಂಕ: 05.09.2012

ಶ್ರೀಮತಿ/ಶ್ರೀ......................................................................................, ಮುಖ್ಯ ಶಿಕ್ಷಕರು, ಸರ್ಕಾರಿ ...................................................................... ಶಾಲೆ, ...................................................................ಗ್ರಾಮ/ಪ್ರದೇಶ ..............................................................................................ಕ್ಲಸ್ಟರ್ ಆದ ತಾವು, ತಮ್ಮ ಶಾಲಾ ಮಕ್ಕಳು, ಸಹಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ಸಂಪೂರ್ಣ ಸಹಕಾರದೊಂದಿಗೆ ಇಲಾಖೆಯು ಆಯೋಜಿಸಿದ್ದ **"ಶಾಲಾ ಸಂಪೂರ್ಣ ಸ್ವಚ್ಛತಾ ಪಾಕ್ಷಿಕ"** ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ಅನುಷ್ಠಾನಗೊಳಿಸಿ ಶುಭ್ರ ಶಾಲಾ ಆವರಣ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ನಿರ್ಮಲ ಶೌಚಾಲಯ ನಿರ್ಮಾಣ ಮತ್ತು ನಿರ್ವಹಣೆ ಮಾಡಲು ಶ್ರಮಿಸುತ್ತಿರುವುದಕ್ಕಾಗಿ ನಿಮ್ಮನ್ನು ಪ್ರಶಂಸನಾ ಪತ್ರ ನೀಡಿ ಗೌರವಿಸಿದೆ. ಮುಂದೆಯೂ ಉತ್ತಮ ಗುಣಮಟ್ಟವನ್ನು ಕಾಯ್ದಿರಿಸಿಕೊಂಡು ಹೋಗಲು ತಿಳಿಸಿದೆ.

ಉಪನಿರ್ದೇಶಕರು

.......................................................ಜಿಲ್ಲೆ

ಕ್ಷೇತ್ರ ಶಿಕ್ಷಣಾಧಿಕಾರಿಗಳು

................................................ ತಾಲ್ಲೂಕು

\\10.96.135.22\typing3server\D\Planning\clean.docx